ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	694
ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ
ಉತ್ತರಿಸುವ ದಿನಾಂಕ	:	17-12-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್‌ಗಳು, ವಸತಿ ಶಾಲೆಗಳು, ಆಶ್ರಮ ಶಾಲೆಗಳು ಹಾಗೂ ಇತರೆ ಸಂಸ್ಥೆಗಳ ಸಂಖ್ಯೆ ಎಷ್ಟು; (ವಿವರಗಳು ಅಂಕಿ ಅಂಶಗಳನ್ನು ಜಿಲ್ಲಾವಾರು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿವಾರು ಒದಗಿಸುವುದು)	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್‌ಗಳು, ವಸತಿ ಶಾಲೆಗಳು, ಆಶ್ರಮ ಶಾಲೆಗಳ ವಿವರ ಕೆಳಕಂಡಂತಿದೆ:- (see table below) ಜಿಲ್ಲಾವಾರು ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ.
ಆ)	ಸದರಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಒದಗಿಸಲಾಗುತ್ತಿರುವ ಸೌಕರ್ಯ ಹಾಗೂ ಸೌಲಭ್ಯಗಳಾವುವು; (ವಿವರ ಒದಗಿಸುವುದು)	ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಒದಗಿಸಲಾಗುತ್ತಿರುವ ಸೌಕರ್ಯ ಹಾಗೂ ಸೌಲಭ್ಯಗಳ ವಿವರ ಕೆಳಕಂಡಂತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನ ವ್ಯವಸ್ಥೆ ಮಾಡಲಾಗುತ್ತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ಸಾಬೂನು, ಪೇಸ್ಟ್, ಕೊಬ್ಬರಿ ಎಣ್ಣೆ, ಟಾಲ್ಕಂ ಪೌಡರ್ ಇತ್ಯಾದಿ ಹೊಂದಿರುವ ಶುಚಿಸಂಭ್ರಮ ಕಿಟ್‌ಗಳನ್ನು ನೀಡಲಾಗುತ್ತಿದೆ. • ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಶೂ ಸಾಕ್ಸ್, ಪಠ್ಯಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರಗಳನ್ನು ನೀಡಲಾಗುತ್ತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ಟೂ ಟಯರ್ ಕಾಟ್, ಹಾಸಿಗೆ, ಹೊದಿಕೆ ಮತ್ತು ದಿಂಬು ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. • ದಿನಪತ್ರಿಕೆಗಳನ್ನು ಒದಗಿಸಲಾಗುತ್ತಿದೆ. • ಗ್ರಂಥಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. • ಆರೋಗ್ಯ ಇಲಾಖೆಯಿಂದ ಎಸ್.ಸಿ.ಎಸ್.ಪಿ ಅಡಿಯಲ್ಲಿ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು

ಇಲಾಖೆ	ಹಾಸ್ಟಲ್‌ಗಳು	ವಸತಿ ಶಾಲೆಗಳು	ಆಶ್ರಮ ಶಾಲೆಗಳು
ಸಮಾಜ ಕಲ್ಯಾಣ ಇಲಾಖೆ	1867	68	-
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ	-	826	-
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	2438	-	18

		ಒದಗಿಸಲಾಗುತ್ತಿದೆ.
ಇ)	ಸದರಿ ಹಾಸ್ಟೆಲ್‌ಗಳಲ್ಲಿ ಸ್ಥಳಾವಕಾಶ, ಕುಡಿಯುವ ನೀರು, ಶೌಚಾಲಯ, ಭದ್ರತೆ ಮತ್ತು ವಿದ್ಯಾರ್ಥಿನಿಯರ ಸುರಕ್ಷತೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಹಾಸ್ಟೆಲ್/ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ಹೆಚ್ಚುವರಿ ಕೊಠಡಿಗಳನ್ನು ಮತ್ತು ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದ್ದು, ಕುಡಿಯುವ ನೀರಿನ ವ್ಯವಸ್ಥೆ, ಸೋಲಾರ್ ವಾಟರ್ ಹೀಟರ್ ವ್ಯವಸ್ಥೆ ಮಾಡಲಾಗುತ್ತಿದೆ. ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್‌ಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ಹೆಚ್ಚುವರಿ ಕೊಠಡಿಗಳನ್ನು ಬಾಡಿಗೆಗೆ ಪಡೆಯಲಾಗುತ್ತಿದೆ. ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಭದ್ರತೆಯ ದೃಷ್ಟಿಯಿಂದ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಕಾಂಪೌಂಡ್ ಗೋಡೆಗೆ ಫೆನ್ಸಿಂಗ್ ಅಳವಡಿಸುವುದರೊಂದಿಗೆ ಮಹಿಳಾ ರಾತ್ರಿ ಕಾವಲುಗಾರರನ್ನು ನೇಮಕ ಮಾಡಲಾಗಿರುತ್ತದೆ. ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಹಿಳಾ ವಾರ್ಡನ್‌ಗಳನ್ನೇ ನೇಮಿಸಲಾಗುತ್ತಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿನ 8 ರಿಂದ 10 ನೇ ತರಗತಿ ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣೆಗಾಗಿ ಕರಾಟೆ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುತ್ತಿದೆ.

ಸಂಖ್ಯೆ: ಸಕಇ 542 ಮೊದೇಶಾ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-72 (694) ಗೆ

ಅನುಬಂಧ-1

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿಯ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳ ವಿವರ

ಕ್ರ. ಸಂ	ಜಿಲ್ಲೆ	ಸರ್ಕಾರಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ						ಸರ್ಕಾರಿ ವಸತಿ ಶಾಲೆಗಳ ಸಂಖ್ಯೆ	ಅಂತೂ ಒಟ್ಟು
		ಮೆಟ್ರಿಕ್ ಪೂರ್ವ			ಮೆಟ್ರಿಕ್ ನಂತರ				
		ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು		
1	ಬೆಂಗಳೂರು ನಗರ	20	8	28	16	11	27	2	57
2	ಬೆಂಗಳೂರು ಗ್ರಾಮಾಂತರ	18	5	23	5	4	9	0	32
3	ಚಿತ್ರದುರ್ಗ	37	15	52	21	16	37	0	89
4	ದಾವಣಗೆರೆ	29	9	38	16	10	26	1	65
5	ಕೋಲಾರ	38	14	52	13	6	19	1	72
6	ತುಮಕೂರು	50	13	63	22	14	36	2	101
7	ರಾಮನಗರ	28	9	37	7	6	13	0	50
8	ಚಿಕ್ಕಬಳ್ಳಾಪುರ	39	10	49	15	8	23	1	73
9	ಶಿವಮೊಗ್ಗ	35	14	49	13	13	26	2	77
10	ಮೈಸೂರು	36	11	47	17	17	34	2	83
11	ಚಾಮರಾಜನಗರ	29	11	40	7	9	16	0	56
12	ಮಂಡ್ಯ	33	13	46	11	10	21	0	67
13	ಹಾಸನ	41	17	58	15	15	30	5	93
14	ಚಿಕ್ಕಮಗಳೂರು	26	12	38	13	7	20	2	60
15	ಕೊಡಗು	10	7	17	2	2	4	1	22
16	ದಕ್ಷಿಣ ಕನ್ನಡ	11	8	19	5	6	11	1	31
17	ಉಡುಪಿ	9	6	15	3	4	7	0	22

18	ಬೆಳಗಾಂ	51	15	66	19	9	28	3	97
19	ಬಿಜಾಪುರ	46	10	56	10	7	17	1	74
20	ಬಾಗಲಕೋಟೆ	33	10	43	13	8	21	3	67
21	ಧಾರವಾಡ	9	5	14	11	5	16	1	31
22	ಗದಗ್	21	5	26	12	5	17	2	45
23	ಹಾವೇರಿ	29	8	37	13	8	21	7	65
24	ಕಾರವಾರ	17	9	26	4	3	7	3	36
25	ಗುಲ್ಬರ್ಗಾ	62	10	72	20	12	32	11	115
26	ರಾಯಚೂರು	35	11	46	16	12	28	7	81
27	ಕೊಪ್ಪಳ	26	7	33	10	6	16	1	50
28	ಬಳ್ಳಾರಿ	46	15	61	28	13	41	1	103
29	ಬೀದರ್	34	8	42	12	7	19	6	67
30	ಯಾದಗಿರಿ	32	6	38	10	4	14	2	54
	ಒಟ್ಟು	930	301	1231	379	257	636	68	1935